ತೆಗೆದುಕೊಂಡು ಬೇಗ ಒಂದು ದೊಡ್ಡ ಮನೆ ಕಟ್ಟಿಕೊಳ್ಳಬೇಕು... ಮಗನ ಭವಿಷ್ಯಕ್ಕಾಗಿ ಹಣ ಉಳಿತಾಯ ಮಾಡಬೇಕು... ಈಗ ಸುನಂದಾ ಏಳನೆಯ ಕ್ಲಾಸು... ಇನ್ನು ಮುಂದೆ ಅವಳು ಹೈಸ್ಕೂಲಿಗೆ ಹೋಗುತ್ತಾಳೆ... ಅವಳ ಓದಿನ ಖರ್ಚು, ಮುಂದಿನ ಅವಳ ಮದುವೆಯ ಖರ್ಚು, ಎಲ್ಲದಕ್ಕೂ ಹಣವನ್ನು ಎಲ್ಲಿಂದ ಹೊಂದಿಸುವುದು... ಹತ್ತು ವರ್ಷಗಳ ಕಾಲ ನಮ್ಮ ಕೈಲಾದಷ್ಟು ಅವಳನ್ನು ಸುಖವಾಗಿ ಬೆಳೆಸಿದ್ದೇವೆ... ಈಗ ಏಳನೆಯ ಕ್ಲಾಸು ಮುಗಿದ ಮೇಲೆ ಅವಳನ್ನು ಊರಿಗೆ ಕರೆದುಕೊಂಡು ಹೋಗಿ ಬಿಡಿ... ಅವಳ ಅಪ್ಪ ಅವ್ವ ಹೈಸ್ಕೂಲು, ಕಾಲೇಜು ಓದಿಸಿಕೊಂಡು ಮದುವೆ ಮಾಡಲಿ..'

ಕೇಶವನಿಗೂ ತನ್ನ ಹೆಂಡತಿ ಹೇಳುತ್ತಿರುವುದು ನಮ್ಮ ಸಂಸಾರದ ಹಿತಕ್ಕಾಗಿಯೇ ಎಂದುಕೊಂಡು ಅವಳ ಆಲೋಚನೆಗಳು ಸರಿಯಾಗಿಯೇ ಇವೆ ಅನ್ನಿಸಿತು. ಆದರೂ ತಕ್ಷಣವೇ ಅವನಿಗೆ ಏನೊಂದೂ ನಿರ್ಧಾರ ತೆಗೆದುಕೊಳ್ಳಲಾಗದೆ ಸುನಂದಾ ಏಳನೆಯ ತರಗತಿ ಮುಗಿಸಲಿ ಆಮೇಲೆ ನೋಡೋಣ ಎಂದು ಹೇಳಿ ತನ್ನ ಹೆಂಡತಿಯನ್ನು ಸಮಾಧಾನಪಡಿಸಿ ಸುಮ್ಮನಾದ. ಅವನ ಮನದಲ್ಲಿ ಅಣ್ಣನ ಮಗಳನ್ನು ಸಾಕುತ್ತೇವೆ ಎಂದು ಕರೆದುತಂದು ಇಷ್ಟುದಿನ ಸಾಕಿ ಈಗ ವಾಪಸ್ಸು ಊರಿಗೆ ಕರೆದುಕೊಂಡು ಹೋದರೆ ನೋಡಿದ ಜನ ಏನೆನ್ನುತ್ತಾರೆ ಎಂಬ ಅಂಜಿಕೆ ಶುರುವಾಗಿತ್ತು. ಸುನಂದಾ ಏಳನೆಯ ತರಗತಿ ಮುಗಿಸಿ ಫಲಿತಾಂಶ ಪ್ರಕಟವಾಗಿ ತನ್ನ ಶಾಲೆಗೇ ಹೆಚ್ಚು ಅಂಕ ಪಡೆದು ಪಾಸಾಗಿ, ಬೇಸಿಗೆಯ ರಜೆ ಪ್ರಾರಂಭವಾಗಿತ್ತು. ಸುನಂದಾ ಇಲ್ಲಿಯೇ ಉಳಿದರೆ ಮತ್ತೆ ಎಂಟನೆಯ ತರಗತಿಗೆ ಇಲ್ಲಿಯೇ ಶಾಲೆಗೆ ಸೇರಿಸಬೇಕಾದೀತು ಎಂಬ ಆತಂಕ ಲಕ್ಷ್ಮಿ, ಕೇಶವರನ್ನು ಕಾಡತೊಡಗಿತ್ತು. ಇದರಿಂದಾಗಿ ತನ್ನೆಲ್ಲಾ ಹಿಂಜರಿಕೆಗಳನ್ನು ಬದಿಗಿಟ್ಟು ಕೇಶವ ಅಂದು ಭಾನುವಾರ ತನ್ನ ಅಣ್ಣ ಅತ್ತಿಗೆಗೆ ವಿಷಯ ತಿಳಿಸಲೆಂದು ಗಟ್ಟಿ ಮನಸ್ಸು ಮಾಡಿಕೊಂಡು ಬೆಂಗಳೂರಿನಿಂದ ಬಸ್ಸು ಹತ್ತಿ ಊರಿಗೆ ಬಂದಿದ್ದ.

**'ಮಮ್ಮೀ ಪ್ಲೀಸ್... ಡ್ಯಾಡಿ ಪ್ಲೀಸ್... ನನ್ನನ್ನ ಕಳಿಸಬೇಡಿ... ನಾನು ಬೇಕಾದ್ರೆ ಸ್ಕೂಲಿಗೂ ಹೋಗೋದಿಲ್ಲ... ಇಲ್ಲೇ ನಿಮ್ಮ ಜೊತೆ ಇರ್ತೀನಿ.. ಮಮ್ಮೀಗೆ ಹೆಲ್ಪ್ ಮಾಡಿಕೊಂಡು ಪಾಪೂನ್ನೂ ನೋಡಿಕೊಂಡು ಇರ್ತೀನಿ...' ಎಂದು ಸುನಂದಾ ರೋದಿಸುತ್ತಾ ಪರಿಪರಿಯಾಗಿ ಬೇಡಿಕೊಂಡರೂ ಲಕ್ಷ್ಮಿ, ಕೇಶವರ ಮನಸ್ಸುಗಳು ಕರಗಲಿಲ್ಲ.**

★★★

'ಏನೂ ಬೇಜಾರು ಮಾಡ್ಕೋಬೇಡಿ... ನಾನೂ ನನ್ನ ಹೆಂಡತಿ ಇಷ್ಟುದಿನ ಅಂದರೆ ಹತ್ತುವರ್ಷ ಸುನಂದಾಳನ್ನು ಸುಖವಾಗಿ ಸಾಕಿದ್ದೇವೆ... ಈಗ ನಮಗೂ ದೇವರು ಮಗನೊಬ್ಬನನ್ನು ಕೊಟ್ಟಿದ್ದಾನೆ... ಸಂಸಾರದ ಹೊರೆ ಜಾಸ್ತಿಯಾಗಿದೆ... ಸಿಟಿಯಲ್ಲಿ ಇಬ್ಬರು ಮಕ್ಕಳನ್ನು ಸಾಕುವುದು ಕಷ್ಟದ ಕೆಲಸ... ಸುನಂದಾಳನ್ನು ಕರೆದುಕೊಂಡು ಬರುತ್ತೇನೆ... ಇಲ್ಲಿಯೇ ಹೈಸ್ಕೂಲಿಗೆ ಸೇರಿಸಿ ಓದಿಸಿಕೊಳ್ಳಿ...' ಎಂದು ಕೇಶವ ತನ್ನಲ್ಲಿದ್ದ ಧೈರ್ಯವನ್ನೆಲ್ಲಾ ಒಂದುಗೂಡಿಸಿಕೊಂಡು ತಗ್ಗಿದ ದನಿಯಲ್ಲಿ ಹೇಳಿದಾಗ ಕೃಷ್ಣೇಗೌಡ ಏನೂ ಮಾತನಾಡಲಿಲ್ಲ.